ವ್ಯಕ್ತಿ, ಸಂಘಟನೆಗೆ ಹೋಲಿಕೆ ಸಲ್ಲ

ಹನುಮಂತನನ್ನು ಒಬ್ಬ ವ್ಯಕ್ತಿ , ಸಂಘಟನೆಗೆ ಹೋಲಿಸಿ ಅಪಮಾನ ಮಾಡಿದ್ದಾರೆಂದು ಆರೋಪ

ಬೆಂಗಳೂರು: ಭಜರಂಗದಳ ನಿಷೇಧದ ಬಗ್ಗೆ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಪ್ರಸ್ತಾಪಗೊಂಡ ಬೆನ್ನಲ್ಲೇ ಮುಗಿಬಿದ್ದಿರುವ ಪ್ರಧಾನಿ ಮೋದಿ ಮತ್ತು ಬಿಜೆಪಿ ನಾಯಕರಿಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲ, 'ರಾಜಧರ್ಮ ಮತ್ತು ಕರ್ತವ್ಯದ ಪ್ರತೀಕವಾದ ಮಹಾನ್ ಹನುಮಂತನನ್ನು ಯಾವುದೋ ಒಬ್ಬ ವ್ಯಕ್ತಿ ಅಥವಾ ಸಂಘಟನೆಗೆ ಹೋಲಿಕೆ ಮಾಡುವ ಮೂಲಕ ಪ್ರಧಾನಿ ನರೇಂದ್ರ ಮೋದಿ, ಹನುಮಂತನಿಗೆ ಅಪಮಾನ ಮಾಡಿದ್ದಾರೆ' ಎಂದು ಹೇಳಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಸುರ್ಜೇವಾಲ, 'ಹನುಮಂತನನ್ನು ಭಜರಂಗದಳದ ಜತೆ ಹೋಲಿಕೆ ಮಾಡಿದ ಪ್ರಧಾನಮಂತ್ರಿ ಕೂಡಲೇ ಕ್ಷಮೆ ಕೋರಬೇಕು. ಇಲ್ಲದಿದ್ದರೆ, ಲಕ್ಷಾಂತರ ಹನುಮಂತನ ಭಕ್ತರು ಹೋರಾಟ ಮಾಡುತ್ತಾರೆ. ಕನ್ನಡಿಗರು 40 ಪರ್ಸೆಂಟ್ ಭ್ರಷ್ಟಾಸುರರ ದಹನಕ್ಕೆ ಸಿದ್ಧರಾಗಿದ್ದಾರೆ' ಎಂದು ಅವರು ಹೇಳಿದ್ದಾರೆ.

'ಅಷ್ಟಕ್ಕೂ ಹನುಮಂತ ರಾಜಧರ್ಮ ಪಾಲನೆಯ ಪ್ರತೀಕ. ಅಷ್ಟೇ ಅಲ್ಲ, ಗೌರವ ಹಾಗೂ ಕರ್ತವ್ಯ, ಸೇವೆ ಹಾಗೂ ತ್ಯಾಗದ ಪ್ರತೀಕ. ಇಂತಹ ಹನುಮಂತನನ್ನು ಯಾವುದೇ ಒಬ್ಬ ವ್ಯಕ್ತಿ ಅಥವಾ ಸಂಘಟನೆಗೆ ಹೋಲಿಕೆ ಮಾಡುವುದು ಹನುಮಂತನಿಗೆ ಮಾಡಬಹುದಾದ ದೊಡ್ಡ ಅಪಮಾನ. ಈ ಮೂಲಕ ಪ್ರಧಾನಿ ಮೋದಿ ಅವರು ಲಕ್ಷಾಂತರ ಹನುಮಂತನ ಭಕ್ತರ ಭಾವನೆಗಳಿಗೆ ಧಕ್ಕೆ ತಂದಿದ್ದಾರೆ' ಎಂದು ದೂರಿದ್ದಾರೆ.

'ಸಂವಿಧಾನ ಮತ್ತು ಕಾನೂನಿನಲ್ಲಿ ಯಾವುದೇ ವ್ಯಕ್ತಿ ಅಥವಾ ಸಂಘಟನೆ ದ್ವೇಷ ಹರಡಿ, ಶತ್ರುತ್ವ ಪಸರಿಸುವ ಸಂಘಟನೆ ಅಥವಾ ವ್ಯಕ್ತಿ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಬಹುದು ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಈ ರಾಜಧರ್ಮವನ್ನು ಪಾಲಿಸಲು ಪ್ರಧಾನಿ ಮತ್ತು ಮುಖ್ಯಮಂತ್ರಿ ಅದನ್ನು ಪಾಲಿಸಲು ನಿರಾಕರಿಸುತ್ತಿರುವುದು ದುರಂತ' ಎಂದು ಹೇಳಿದ್ದಾರೆ.

'ಪ್ರತಿ ಚುನಾವಣೆಯಲ್ಲೂ ಭ್ರಷ್ಟಾಚಾರ, ಬೆಲೆ ಏರಿಕೆ, ನಿರುದ್ಯೋಗ ಸಮಸ್ಯೆ, ದ್ವೇಷ ರಾಜಕೀಯ ವಿಚಾರವಾಗಿ ಉತ್ತರಿಸುವ ಬದಲು ಧರ್ಮದ ಹೆಸರಿನಲ್ಲಿ ಸಮಾಜ ವಿಭಜನೆ ಮಾಡಲು ಮುಂದಾಗುತ್ತಾರೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಅವರ ಸಂಗಡಿಗರು ರಾಜ್ಯ ಬಿಜೆಪಿ ಸರ್ಕಾರದ 40 ಪರ್ಸೆಂಟ್ ಭ್ರಷ್ಟಾಚಾರದ ಬಗ್ಗೆ ಮಾತನಾಡುವುದಿಲ್ಲ, ಕೇವಲ ಸಮಾಜ ವಿಭಜಿಸಿ ಚುನಾವಣೆ ನಡೆಸುವ ಪ್ರಯತ್ನ ಮಾಡುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಂತಹ ಸುಳ್ಳನ್ನು ಸ್ವಯಂಘೋಷಿತ ಚಾಣಕ್ಯ, ಬಿ.ಎಲ್. ಸಂತೋಷ್ ಅವರ ಕಾರ್ಖಾನೆಯಲ್ಲೇ ತಯಾರು ಮಾಡಲಾಗಿದೆ ಎಂದೂ ಅವರು ಆರೋಪಿಸಿದ್ದಾರೆ.

ದ.ಒಳನಾಡು ಸೇರಿ ಕೆಲವೆಡೆ ಇನ್ನೂ ಎರಡು ದಿನ ಮಳೆ

- ಮುಂದಿನ 2 ದಿನ ಗುಡುಗು ಸಹಿತ ಭಾರೀ ಮಳೆ
- ಹವಾಮಾನ ಇಲಾಖೆ ಎಚ್ಚರಿಕೆ

ಬೆಂಗಳೂರು: ದಕ್ಷಿಣ ಒಳನಾಡಿನ ಎಲ್ಲ ಜಿಲ್ಲೆಗಳು, ಕರಾವಳಿ, ಉತ್ತರ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಮುಂದಿನ ಎರಡು ದಿನ ಗುಡುಗು ಸಹಿತ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ನೆಚ್ಚರಿಕೆ ಕೊಟ್ಟಿದೆ. ದಕ್ಷಿಣ ಒಳನಾಡಿನ ಹಲವು ಕಡೆ, ಕರಾವಳಿಯ ದಕ್ಷಿಣ ಕನ್ನಡ, ಉಡುಪಿ, ಉತ್ತರ ಒಳನಾಡಿನ ಬೀದರ್, ಕಲಬುರಗಿ, ರಾಯಚೂರು, ಯಾದಗಿರಿ, ಕೊಪ್ಪಳ ಜಿಲ್ಲೆಗಳ ಒಂದೆರಡು ಕಡೆ ಮಳೆಯಾಗುವ ಸಾಧ್ಯತೆಗಳಿವೆ. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು ರಾತ್ರಿ ವೇಳೆ ಹಗುರದಿಂದ ಮಳೆಯಾಗುವ ಸಾಧ್ಯತೆಗಳಿವೆ.

ಎಲ್ಲೆಲ್ಲಿ ಎಷ್ಟೆಷ್ಟು ಮಳೆ ?: ಮಂಗಳವಾರ ಮಂಡ್ಯದ ಕೆವಿಕೆಯಲ್ಲಿ 11, ಕೋಲಾರದ ಮಾಲೂರಿನಲ್ಲಿ 9, ಮೈಸೂರಿನ ಸರಗೂರಿನಲ್ಲಿ 7 ಸೆಂ.ಮೀ. ಮಳೆಯಾಗಿದೆ. ರಾಯಚೂರಿನ ಮುದಗಲ್, ಮಂಡ್ಯದ ಕೃಷ್ಣರಾಜಸಾಗರ, ರಾಮನಗರದ ಕನಕಪುರ, ಚಾಮರಾಜನಗರದ ಹರದನಹಳ್ಳಿ ತಲಾ 6 ಸೆಂ.ಮೀ. ಮಳೆಯಾಗಿದೆ. ರಾಯಚೂರಿನ ಗಬ್ಬೂರು, ಜಾಲಹಳ್ಳಿ ಮೈಸೂರಿನ ಸಾಲಿಗ್ರಾಮ, ರಾಯಚೂರು, ಮಂಡ್ಯದ ಶ್ರೀರಂಗಪಟ್ಟಣ, ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣ, ತುಮಕೂರಿನ ಮಧುಗಿರಿಯಲ್ಲಿ ತಲಾ 5 ಸೆಂ.ಮೀ. ಮಳೆಯಾಗಿದೆ. ಚಾಮರಾಜನಗರದ ಬಂಡೀಪುರ, ಕೊಳ್ಳೇಗಾಲ, ಚಾಮರಾಜನಗರ, ಮೈಸೂರು ತಲಾ 4 ಸೆಂ.ಮೀ., ಬೆಂಗಳೂರಿನ ಜ್ಞಾನಭಾರತಿ ಕ್ಯಾಂಪಸ್, ಉತ್ತರ ಹಳ್ಳಿ, ಬೆಂಗಳೂರು ನಗರದಲ್ಲಿ ತಲಾ 3 ಸೆಂ.ಮೀ. ಮಳೆಯಾಗಿದೆ. ಬೀದರ್‌ನ ಔರಾದ್, ನಿಟ್ಟೂರು, ಅಂಟಾಳ, ರಾಯಚೂರಿನ ಕುರ್ಡಿ, ಮಸ್ಕಿ ಮಾನ್ವಿ ತಲಾ 2 ಸೆಂ.ಮೀ ಮಳೆಯಾಗಿದೆ. ಕಾರವಾರದಲ್ಲಿ ಗರಿಷ್ಠ 37.1 ಡಿಗ್ರಿ ಸೆಲ್ಸಿಯಸ್ ರಾಜ್ಯದಲ್ಲೇ ಗರಿಷ್ಠ ಉಷ್ಣಾಂಶ ದಾಖಲಾಗಿದೆ.

ಕರ್ನಾಟಕದಲ್ಲೂ ರಾಜಸ್ಥಾನ ಮಾದರಿ ಕಲ್ಯಾಣ

ಮಂಗಳೂರು: ಜನಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನಕ್ಕೆ ರಾಜಸ್ಥಾನವೇ ಮಾದರಿ. ಅದೇ ಮಾದರಿಯನ್ನೇ ರಾಜ್ಯದಲ್ಲೂ ಕಾಂಗ್ರೆಸ್ ಬಂದರೆ ಅನುಷ್ಠಾನ ಮಾಡಲಿದೆ ಎಂದು ರಾಜಸ್ಥಾನ ಸಿಎಂ ಅಶೋಕ್ ಗೆಹ್ಲೋಟ್ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ರಾಜಸ್ಥಾನದಲ್ಲಿ ನಾವು ಕೈಗೊಂಡಿರುವ ಬಡವರ ಪರ ಕಲ್ಯಾಣ ಯೋಜನೆಗಳಿಗೆ ಎಲ್ಲೆಡೆಯಿಂದ ಮೆಚ್ಚುಗೆ ಸಿಕ್ಕಿದೆ, ಬೆಲೆ ಏರಿಕೆಯಿಂದ ತತ್ತರಿಸಿರುವ ಜನರಿಗೆ ಇಂತಹ ಯೋಜನೆಗಳು ನೆರವಾಗುತ್ತವೆ ಎಂದರು. ಬೆಲೆಏರಿಕೆ, ಭ್ರಷ್ಟಾಚಾರ, ನಿರುದ್ಯೋಗ, ಬಡವರು-ಶ್ರೀಮಂತರ ನಡುವಿನ ಅಂತರ ಹೆಚ್ಚುತ್ತಿರುವ ವಿಷಯವನ್ನೇ ರಾಹುಲ್ ತಮ್ಮ ಭಾರತ್ ಜೋಡೋ ಯಾತ್ರಾದಲ್ಲಿ ಪ್ರಸ್ತಾವಿಸಿದ್ದರು. ವಿಪಕ್ಷದವರು ಎತ್ತಿ ತೋರಿಸುವ ತಪ್ಪುಗಳನ್ನು ಒಪ್ಪಿಕೊಳ್ಳುವ ಸೌಜನ್ಯ ಆಡಳಿತ ಪಕ್ಷಕ್ಕೆ ಇರಬೇಕು. ರಾಜಸ್ಥಾನದಲ್ಲಿ ನಾನು ಇದನ್ನು ಪಾಲಿಸಿದ್ದೇನೆ. ಆದರೆ ಕೇಂದ್ರ ಸರಕಾರ ಮಾತ್ರ ಯಾರ ಮಾತನ್ನೂ ಕೇಳದೆ ಫ್ಯಾಸಿಸ್ಟ್ ಮನೋಭಾವ ಹೊಂದಿದೆ ಎಂದು ಟೀಕಿಸಿದರು.

ಮೇ 22ರಿಂದ ಜೂ.2ರವರೆಗೆ ದ್ವಿತೀಯ ಪಿಯು ಪೂರಕ ಪರೀಕ್ಷೆ

ಬೆಂಗಳೂರು: ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು 2023ನೇ ಸಾಲಿನ ದ್ವಿತೀಯ ಪಿಯು ಪೂರಕ ಪರೀಕ್ಷೆ ವೇಳಾಪಟ್ಟಿಯನ್ನು ಪ್ರಕಟಿಸಿದ್ದು, ಮೇ 22ರಿಂದ ಜೂ.2ರವರೆಗೆ ಪರೀಕ್ಷೆ ನಡೆಯಲಿವೆ.

ಕೆಲವು ಪರೀಕ್ಷೆಗಳು ಬೆಳಗ್ಗೆ 10.15ರಿಂದ 1.30 ಹಾಗೂ ಮತ್ತೆ ಕೆಲವು ಪರೀಕ್ಷೆ ಮಧ್ಯಾಹ್ನ 2.15ರಿಂದ 5.30ರ ವರೆಗೆ ನಡೆಯಲಿದೆ.

ಮೇ 22- ಕನ್ನಡ, ಅರೇಬಿಕ್, ಮೇ 23- ಐಚ್ಛಿಕ ಕನ್ನಡ, ರಸಾಯನಶಾಸ್ತ್ರ ಮೂಲ ಗಣಿತ, ಮೇ 24 - ಇಂಗ್ಲಿಷ್ (ಮಧ್ಯಾಹ್ನ- ಐಟಿ, ರೀಟೈಲ್, ಆಟೋಮೊಬೈಲ್, ಹೆಲ್ತ್ ಕೇರ್, ಬ್ಯೂಟಿ ಆ್ಯಂಡ್ ವೆಲ್ನೆಸ್), ಮೇ 25- ಸಮಾಜಶಾಸ್ತ್ರ ವಿದ್ಯುನ್ಮಾನ ಶಾಸ್ತ್ರ ಗಣಕ ವಿಜ್ಞಾನ, ಮೇ 26- ಇತಿಹಾಸ, ಸಂಖ್ಯಾಶಾಸ್ತ್ರ, ಮೇ 27- ಹಿಂದಿ(ಮಧ್ಯಾಹ್ನ-ತಮಿಳು, ತೆಲುಗು, ಮಲಯಾಳಂ, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್), ಮೇ 28- ರಜೆ, ಮೇ 29- ಭೂಗೋಳಶಾಸ್ತ್ರ ಮನಃಶಾಸ್ತ್ರ ಭೌತಶಾಸ್ತ್ರ ಮೇ 30- ಭೂಗರ್ಭಶಾಸ್ತ್ರ ಶಿಕ್ಷಣ ಶಾಸ್ತ್ರ ಗೃಹ ವಿಜ್ಞಾನ, ಮೇ 31- ರಾಜ್ಯಶಾಸ್ತ್ರ ಗಣಿತ, ಜೂ.1 ತರ್ಕಶಾಸ್ತ್ರ ಹಿಂದೂಸ್ತಾನಿ ಸಂಗೀತ, ವ್ಯವಹಾರ ಅಧ್ಯಯನ, ಜೂ.2- ಅರ್ಥಶಾಸ್ತ್ರ ಜೀವಶಾಸ್ತ್ರ ಪರೀಕ್ಷೆಗಳು ನಡೆಯಲಿದೆ.

ನೈರುತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. ECN-TRD-32-2021
ದಿನಾಂಕ: 25.04.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಿನ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
[illegible] 1 ಸಂಖ್ಯೆಯ 220ಕೆವಿ ಟರ್ಮಿನಲ್ ಬೇ ಜೊತೆಗೆ [illegible] ಎರಡು ಸ್ಟ್ರಿಂಗ್ 220ಕೆವಿ ಲೈನ್ [illegible] 220/66/11ಕೆವಿ [illegible] 220ಕೆವಿ [illegible] 2-ಫೇಸ್ [illegible] ವಿನ್ಯಾಸ, ಸರಬರಾಜು, ನಿರ್ಮಾಣ, ಪರೀಕ್ಷೆ ಮತ್ತು ಕಾರ್ಯಾರಂಭ.	ರೂ. 6,23,16,710.83

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18-05-2023, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ವಿದ್ಯುತ್ ಎಂಜಿನಿಯರ್ / ಟಿಆರ್‌ಡಿ / ಓಎಚ್ ಬೆಂಗಳೂರು ಕಂಟೋನ್ಮೆಂಟ್

PUB/56/AAV/PRB/SWR/2023-24

S.W.Railways SWRRLY SWRRLY

ಪ್ರಧಾನಿ ಕ್ಷಮೆಯಾಚನೆಗೆ ಕಾಂಗ್ರೆಸ್ ಪಟ್ಟು

ನವದೆಹಲಿ: ಭಗವಾನ್ ಹನುಮಂತನನ್ನು ಭಜರಂಗದಳಕ್ಕೆ ಹೋಲಿಕೆ ಮಾಡುವ ಮೂಲಕ ಪ್ರಧಾನಿ ನರೇಂದ್ರಮೋದಿ ಅಸಂಖ್ಯಾತ ಭಕ್ತರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿದ್ದಾರೆ. ಅವರು ಕ್ಷಮೆಯಾಚಿಸಬೇಕು ಎಂದು ಕಾಂಗ್ರೆಸ್ ಪಟ್ಟು ಹಿಡಿದಿದೆ. ನವದೆಹಲಿಯಲ್ಲಿ ಮಾತನಾಡಿದ ಕಾಂಗ್ರೆಸ್ ವಕ್ತಾರ ಪವನ್ ಖೇರಾ, 'ಪ್ರಧಾನಮಂತ್ರಿಯವರು ಇಷ್ಟು ಕೆಳಮಟ್ಟಕ್ಕೆ ಇಳಿದು ಭಕ್ತರಿಗೆ ಅವಮಾನ ಮಾಡುತ್ತಾರೆ ಎಂಬ ನಿರೀಕ್ಷೆ ಇರಲಿಲ್ಲ. ಹನುಮಂತನನ್ನು ಭಜರಂಗದಳಕ್ಕೆ ಹೋಲಿಕೆ ಮಾಡಿ, ಅವಮಾನ ಮಾಡುವ ಅಧಿಕಾರವನ್ನು ಪ್ರಧಾನಿಯವರಿಗೆ ಯಾರೂ ನೀಡಿಲ್ಲ. ಅವರು ಕೂಡಲೇ ಕ್ಷಮೆ ಯಾಚಿಸಬೇಕು' ಎಂದು ಆಗ್ರಹಿಸಿದರು.

ಕರ್ನಾಟಕದಲ್ಲಿ ಪ್ರಚಾರ ಸಭೆಯಲ್ಲಿ ಮಾತನಾಡಿದ್ದ ಪ್ರಧಾನಿ, 'ಭಜರಂಗಿಯ ಭಕ್ತರನ್ನು ಕಾಂಗ್ರೆಸ್ ಕಟ್ಟಿಹಾಕಲು ನೋಡುತ್ತಿದೆ' ಎಂದಿದ್ದರು. ಕರ್ನಾಟಕದಲ್ಲಿ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಮಾತನಾಡಿ, 'ಮೋದಿ ಹಾಗೂ ಅವರ ತಂಡಕ್ಕೆ ಬಿಜೆಪಿಯ 40 ಪರ್ಸೆಂಟ್ ಕಮಿಷನ್ ಬಗ್ಗೆ ಮಾತನಾಡಲು ಆಗುತ್ತಿಲ್ಲ, ಬೇರೆ ವಿಚಾರಗಳು ಕಾಣಿಸುತ್ತವೆ. ಹಾಗೆಯೇ, ಭಗವಂತ ಹನುಮನನ್ನು ಯಾವುದೋ ಸಂಘಟನೆಗೆ ಹೋಲಿಕೆ ಮಾಡುವುದು ಅಪಮಾನ. ಇಂಥ ಹೋಲಿಕೆಗಳೆಲ್ಲ ಸ್ವಯಂಘೋಷಿತ ಚಾಣಕ್ಯ ಬಿ.ಎಲ್. ಸಂತೋಷ್ ಅವರಿಂದಲೇ ಸೃಷ್ಟಿಯಾಗುತ್ತಿವೆ' ಎಂದು ಟೀಕಿಸಿದ್ದಾರೆ.

ಇದೇ ವೇಳೆ, ನವದೆಹಲಿಯಲ್ಲಿ ಇರುವ ಕಾಂಗ್ರೆಸ್ ಪ್ರಧಾನ ಕಚೇರಿ ಎದುರು ಪ್ರಣಾಳಿಕೆಯಲ್ಲಿ ನಿಷೇಧದ ಪ್ರಸ್ತಾಪ ಉಲ್ಲೇಖ ಮಾಡಿದ್ದನ್ನು ಖಂಡಿಸಿ ಭಜರಂಗ ದಳದ ಮುಖಂಡರು, ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಕೈ ಪ್ರಣಾಳಿಕೆ ವಿರುದ್ಧ ದಿಲ್ಲಿ ಚು.ಆಯೋಗಕ್ಕೆ ದೂರು

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರನ್ನು ಕಾಂಗ್ರೆಸ್ ನಾಯಕ ಪ್ರಿಯಾಂಕ್ ಖರ್ಗೆ ನಾಲಾಯಕ್ ಎಂದು ಸಂಬೋಧಿಸಿದ್ದನ್ನು ವಿರೋಧಿಸಿ ಹಾಗೂ ಬಜರಂಗದಳವನ್ನು ರದ್ದುಗೊಳಿಸುವ ಕಾಂಗ್ರೆಸ್ ಸರ್ಕಾರದ ಭರವಸೆಯನ್ನು ಆಕ್ಷೇಪಿಸಿ ಚುನಾವಣೆ ಆಯೋಗಕ್ಕೆ ಬಿಜೆಪಿ ಮೌಖಿಕವಾಗಿ ದೂರು ಸಲ್ಲಿಸಿದೆ.

ಕೇಂದ್ರ ಸಚಿವ ಪಿಯೂಷ್ ಗೋಯಲ್ ನೇತೃತ್ವದ ನಿಯೋಗವು ಆಯೋಗಕ್ಕೆ ಭೇಟಿ ನೀಡಿ, ದೂರು ಸಲ್ಲಿಕೆ ಮಾಡಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ. ಈ ಕುರಿತು ಮಾಧ್ಯಮಗಳ ಜತೆಗೆ ಗೋಯಲ್ ಮಾತನಾಡಿ, ಭಜರಂಗದಳವು ಭಗವಾನ್ ಆಂಜನೇಯನಿಗೆ ಸಮರ್ಪಿತವಾದ ಹಾಗೂ ಜನಸೇವೆಗೆ ಉದ್ದೇಶಿಸಿದ ಸಂಘಟನೆ. ಆರ್‌ಎಸ್‌ಎಸ್ ಸಂಯೋಜಿತ ವಿಶ್ವಹಿಂದೂ ಪರಿಷತ್‌ನ ಯುವಘಟಕವಾಗಿರುವ ಭಜರಂಗದಳವನ್ನು ನಿಷೇಧಿಸುವುದಾಗಿ ಘೋಷಿಸುವ ಕಾಂಗ್ರೆಸ್‌ಗೆ ನಾಚಿಕೆಯಾಗಬೇಕು. ಈ ನಿರ್ಣಯವೇ ಕಾಂಗ್ರೆಸ್‌ನ ಓಲೈಕೆ ಸಿದ್ಧಾಂತದ ಕೈಗನ್ನಡಿ ಎಂದಿದ್ದಾರೆ. ಅಲ್ಲದೆ, ಮೋದಿ ಅವರನ್ನು ಮೊದಲಿಗೆ ಖರ್ಗೆ ವಿಷಸರ್ಪವೆಂದೂ, ನಂತರ ಅವರ ಪುತ್ರ ನಾಲಾಯಕ್ ಎಂಬುದರ ಬಗ್ಗೆಯೂ ಆಯೋಗದ ಜತೆಗೆ ಮಾತನಾಡಿ, ಕಠಿಣ ಕ್ರಮಕ್ಕೆ ಆಗ್ರಹಿಸಿದ್ದೇವೆ ಎಂದು ಪಿಯೂಷ್ ತಿಳಿಸಿದ್ದಾರೆ.

ಇಂದಿನ ಪಂಚಾಂಗ | ದಿನ ಭವಿಷ್ಯ

ಅದೃಷ್ಟ ಸಂಖ್ಯೆ: 5

• ಜಯತೀರ್ಥ ಆಚಾರ್ಯ

- ■ ಶೋಭಕೃತ್ ಸಂ||ರದ ಮೇಷ ಮಾಸ ದಿನ 19 ಸಲುವ ವೈಶಾಖ ಶುದ್ಧ ತ್ರಯೋದಶಿ 44 ಗಳಿಗೆ
- ■ ಮಹಾನಕ್ಷತ್ರ: ಭರಣಿ ■ ನಿತ್ಯನಕ್ಷತ್ರ: ಹಸ್ತಾ 37 ಗಳಿಗೆ ■ ಋತು: ವಸಂತ
- ■ ರಾಹುಕಾಲ: 12.00-1.30 ಗಂಟೆ ■ ಗುಳಿಕಕಾಲ: 10.30-12.00 ಗಂಟೆ

ಮೇಷ	ನಿರೀಕ್ಷಿತ ಸ್ಥಾನ ಗೌರವಕ್ಕೆ ಹೆಚ್ಚಿದ ಪರಿಶ್ರಮ. ಪರರ ವಿಚಾರದಲ್ಲಿ ಜವಾಬ್ದಾರರಾಗದಿರಿ. ವಿದ್ಯಾರ್ಥಿಗಳಿಗೆ ಅನುಕೂಲಕರ ಪರಿಸ್ಥಿತಿ. ಆರೋಗ್ಯ ಗಮನಿಸಿ. ಹಣಕಾಸಿನ ವಿಚಾರದಲ್ಲಿ ಎಚ್ಚರಿಕೆ ಇರಲಿ.
ವೃಷಭ	ಹೆಚ್ಚಿದ ಸ್ಥಾನ ಮಾನ ಗೌರವ. ಗೃಹೋಪಯೋಗಿ ವಸ್ತುಗಳ ಸಂಗ್ರಹ. ಉತ್ತಮ ವಾಕ್‌ಚತುರತೆಯಿಂದ ಕೂಡಿದ ದಿನಚರಿ. ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತಿ. ಹಿರಿಯರಿಂದ ಉತ್ತಮ ಮಾರ್ಗದರ್ಶನ.
ಮಿಥುನ	ಆರೋಗ್ಯ ಗಮನಿಸಿ. ಆರ್ಥಿಕವಾಗಿ ಸುದೃಢತೆ. ಸಾಂಸಾರಿಕ ಸುಖ ಮಧ್ಯಮ. ಅನಗತ್ಯ ಚರ್ಚೆ ಮಾಡದಿರಿ. ಧಾರ್ಮಿಕ ವಿಚಾರದಲ್ಲಿ ಅಡೆತಡೆ ಸಂಭವ. ವ್ಯವಹಾರ, ಉದ್ಯೋಗದಲ್ಲಿ ಉತ್ತಮ ಅಭಿವೃದ್ಧಿ
ಕರ್ಕ	ಹಣಕಾಸಿನ ಉಳಿತಾಯಕ್ಕೆ ಆದ್ಯತೆ ನೀಡಿ. ದೂರ ಪ್ರಯಾಣ ಸಂಭವ. ಮಾತೃ ಸಮಾನರಿಂದ ಸಹಕಾರ ಪ್ರೋತ್ಸಾಹ. ಅಧ್ಯಯನದಲ್ಲಿ ಅಧಿಕ ತಲ್ಲೀನತೆ ಪರಿಶ್ರಮ ತೃಪ್ತಿ. ಹಣಕಾಸಿನ ವಿಚಾರದಲ್ಲಿ ಸಾಮಾನ್ಯ ಪ್ರಗತಿ.
ಸಿಂಹ	ತಾಳ್ಮೆ ಅಗತ್ಯ. ಅಧಿಕ ಪರಿಶ್ರಮ. ಆರೋಗ್ಯ ಗಮನಿಸಿ. ಪಾರದರ್ಶಕತೆಗೆ ಆದ್ಯತೆ ನೀಡಿ. ಖರ್ಚುವೆಚ್ಚಗಳಲ್ಲಿ ಹಿಡಿತವಿರಲಿ. ಮಕ್ಕಳ ವಿಷಯದಲ್ಲಿ ಜಾಗ್ರತೆ. ದೂರದ ಮಿತ್ರರ ಭೇಟಿ. ಧಾರ್ಮಿಕ ವಿಷಯಗಳಲ್ಲಿ ಆಸಕ್ತಿ.
ಕನ್ಯಾ	ಆರೋಗ್ಯ ವೃದ್ಧಿ. ಗುರುಹಿರಿಯರ ಮಾರ್ಗದರ್ಶನದ ಲಾಭ. ನೂತನ ಮಿತ್ರರ ಭೇಟಿ. ಬಂಧುಗಳ ಸಮಾಗಮ. ಧಾರ್ಮಿಕ ಕಾರ್ಯಗಳಲ್ಲಿ ಭಾಗಿ. ಉತ್ತಮ ಧನಾರ್ಜನೆ. ಇಷ್ಟಾದಿ ಶುಭಫಲ. ದಾಂಪತ್ಯ ತೃಪ್ತಿಕರ.
ತುಲಾ	ಸಣ್ಣ ಪ್ರಯಾಣ. ಜನಸಮೂಹದಲ್ಲಿ ಮಾನ್ಯತೆ, ಗೌರವ ಅಧಿಕಾರ ಲಭ್ಯ. ಧಾರ್ಮಿಕ ವಿಚಾರಗಳಲ್ಲಿ ಆಸಕ್ತಿ. ಹಿರಿಯರ ಸೇವೆಯಿಂದ ಮನಃತೃಪ್ತಿ. ಆರ್ಥಿಕ ಪ್ರಗತಿ. ಆರೋಗ್ಯ ಸುದೃಢ. ಕೆಲಸ ಕಾರ್ಯಗಳಲ್ಲಿ ಸಫಲತೆ.
ವೃಶ್ಚಿಕ	ಆರೋಗ್ಯದಲ್ಲಿ ಸರಿಯಾದ ನಿಯಮ ಪಾಲಿಸುವುದು ಅಗತ್ಯ. ಹಿರಿಯರಿಗೆ ಮಕ್ಕಳಿಂದ ಸಂತೋಷದ ವಾರ್ತೆ. ವಿದ್ಯಾರ್ಥಿಗಳಿಗೆ ಸಂದರ್ಭೋಚಿತ ಸಹಾಯ ಒದಗಿ ಬರುವುದು. ಅಧ್ಯಯನದಲ್ಲಿ ಪ್ರಗತಿ
ಧನು	ಆಸ್ತಿ ಸಂಪಾದನೆಯಲ್ಲಿ ತಲ್ಲೀನತೆ. ಸಾಲ ಕೊಡುವಾಗ, ಪಡೆಯುವಾಗ ಪೂರ್ವಾಪರ ತಿಳಿದು ನಿರ್ಧರಿಸಿ. ಅನಿರೀಕ್ಷಿತ ಸ್ಥಾನ ಪ್ರಾಪ್ತಿ. ಉತ್ತಮ ಆರೋಗ್ಯ. ಧಾರ್ಮಿಕ ಕಾರ್ಯಗಳಲ್ಲಿ ಹೆಚ್ಚಿದ ಜವಾಬ್ದಾರಿ. ಅಧಿಕ ಶ್ರಮ.
ಮಕರ	ಮಕ್ಕಳ ವಿಚಾರದಲ್ಲಿ ಸುವಾರ್ತೆ. ದೂರದ ವ್ಯವಹಾರಗಳಲ್ಲಿ ಅಭಿವೃದ್ಧಿ ಪ್ರಗತಿ ಕಾಣಲಿದೆ. ಅನಾಯಾಸವಾಗಿ ಧನ ಸಂಪಾದನೆ. ಸತ್ಕಾರ್ಯಕ್ಕೆ ಧನವ್ಯಯ. ಮಿತ್ರರಿಂದ ಉತ್ತಮ ಸಹಕಾರ. ಜವಾಬ್ದಾರಿ ಪ್ರದರ್ಶನ.
ಕುಂಭ	ಅನಗತ್ಯ ವಿಚಾರಗಳಲ್ಲಿ ತೊಡಗಿಸಿಕೊಳ್ಳದಿರಿ. ತಾಳ್ಮೆ, ಸಹನೆಯಿಂದ ವರ್ತಿಸಿ ನಿಮ್ಮ ಕಾರ್ಯಗಳನ್ನು ಸಫಲಗೊಳಿಸಿಕೊಳ್ಳಿ. ಗುರುಹಿರಿಯರೊಂದಿಗೆ, ಮಿತ್ರರೊಂದಿಗೂ ವಿವೇಚನೆಯಿಂದ ವ್ಯವಹರಿಸಿ.
ಮೀನ	ಸುದೃಢ ಆರೋಗ್ಯ. ಉತ್ತಮ ಸ್ಥಾನಮಾನ ಲಭ್ಯ. ಉದ್ಯೋಗದಲ್ಲಿ ಹೆಚ್ಚಿದ ಜವಾಬ್ದಾರಿ, ಯಶಸ್ಸು. ದೂರದ ಮೂಲದಿಂದ ಹಣಕಾಸು ವೃದ್ಧಿ. ನಾನಾರೀತಿಯ ಹೂಡಿಕೆ ಸಂಭವ. ಮಿತ್ರರಿಂದ ಸೂಕ್ತ ಪ್ರೋತ್ಸಾಹ.

ಪರಮೇಶ್ವರ್ ಗೆದ್ದರೆ ನಾನೇ ಗೆದ್ದಂತೆ: ಸಿದ್ದು

ಕೊರಟಗೆರೆ: 'ಬರೋಬ್ಬರಿ 12 ವರ್ಷ ಬಹಳ ಆತ್ಮೀಯವಾಗಿ ಕೆಲಸ ಮಾಡಿದ್ದೇವೆ. ಪರಮೇಶ್ವರ್ ಪ್ರಾಮಾಣಿಕ ಮನುಷ್ಯ ಮತ್ತು ನನಗಿಂತ ನಿಷ್ಠಾವಂತ, ಬುದ್ಧಿವಂತ ಅಂದರೆ ತಪ್ಪಾಗದು. 2023ಕ್ಕೆ ಕೊರಟಗೆರೆ ಕ್ಷೇತ್ರದಲ್ಲಿ ಪರಮೇಶ್ವರ್ ಗೆದ್ದರೇ ನಾನೇ ಗೆದ್ದ ಹಾಗೆ' ಎಂದು ಮಾಜಿ ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಪಟ್ಟಣದ ರಾಜೀವ ಭವನದ ಆವರಣದಲ್ಲಿ ನಡೆದ ಕಾರ್ಯಕರ್ತರ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು. ರಾಜೀವ್ ಭವನ ಉದ್ಘಾಟನೆ ವೇಳೆ ನಾನು ಬಾರದೇ ಇರುವುದಕ್ಕೆ ವಿರೋಧ ಪಕ್ಷದವರು ಅಪಪ್ರಚಾರ ಮಾಡಿದ್ದಾರೆ. 2013 ರಲ್ಲಿಯೂ ಇಂತಹದೇ ಅಪಪ್ರಚಾರ ಮಾಡಿದ್ದರು. ನಿಮಗೆ ಒಂದು ಮಾತು ಹೇಳುತ್ತೇನೆ. ನಮ್ಮಿಬ್ಬರ ನಡುವೆ ಒಂದು ಸಣ್ಣ ಭಿನ್ನಾಭಿಪ್ರಾಯವೂ ಇಲ್ಲ. ಬಿಜೆಪಿ-ಜೆಡಿಎಸ್ ಅಭ್ಯರ್ಥಿ ಸೋಲಿಸಿ ಪರಮೇಶ್ವರ್‌ರನ್ನು ಗೆಲ್ಲಿಸಿ ಎಂದರು.

ಮಾಜಿ ಶಾಸಕ ಕೆ.ಎನ್.ರಾಜಣ್ಣ ಮಾತನಾಡಿ, ಲೋಕಸಭೆ ಚುನಾವಣೆಯಲ್ಲಿ ದೇವೇಗೌಡರನ್ನು ಸೋಲಿಸಿದ್ದು ನಾನು ನಿಜ. ಮಧುಗಿರಿಯಲ್ಲಿ ನನ್ನ ವಿರುದ್ಧ ಹೇಳಿಕೆ ಕೊಡಲಿ, ಆದರೆ, ಪರಮೇಶ್ವರ್ ಸೋಲಿಸಿ ಎಂದು ಕೊರಟಗೆರೆಯಲ್ಲಿಯೂ ಹೇಳಿಕೆ ಕೊಡುತ್ತಾರೆ. ಇದು ಎಂತಹ ಡ್ರಾಮಾ? ಜೆಡಿಎಸ್ ಜಾತಿಗೆ ಮಾತ್ರ ಸೀಮಿತ, ಬಿಜೆಪಿ ಭ್ರಷ್ಟಾಚಾರಕ್ಕೆ ಇಂಬು ನೀಡುತ್ತಿದೆ. ಜಿಲ್ಲೆಯ 11 ಕ್ಷೇತ್ರದಲ್ಲಿಯೂ ಕಾಂಗ್ರೆಸ್ ಗೆಲ್ಲಬೇಕಿದೆ ಎಂದರು.

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಶ್ರೀ ದೇವರಾಜ ಅರಸ್ ಬಡಾವಣೆ,
ಟಮಕ, ಕೋಲಾರ-563 103
Email:bnuregistrar@karnataka.gov.in,Website:www.bnu.karnataka.gov.in
No: BNU/PROC/ANSWER/BOOKLETS/01/2023-24 ದಿನಾಂಕ: 29.04.2023

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ, ಇಲ್ಲಿನ ಪರೀಕ್ಷಾ ವಿಭಾಗಕ್ಕೆ ಉತ್ತರ ಪತ್ರಿಕೆಗಳನ್ನು ಸರಬರಾಜು ಮಾಡಲು ಕರ್ನಾಟಕ ಪಾರದರ್ಶಕ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಕಾಯ್ದೆಯಡಿಯಲ್ಲಿ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಇಲಾಖೆಯಲ್ಲಿ ನೋಂದಾಯಿತ ಹೆಸರಾಂತ ಸಂಸ್ಥೆಗಳಿಂದ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳನ್ನು ದಿನಾಂಕ: 29.04.2023 ರಿಂದ ಕರ್ನಾಟಕ **(http://eproc.karnataka.gov.in)** ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಿ ಪಡೆಯಬಹುದು.

ಸಹಿ/- ಕುಲಸಚಿವರು,
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ 02/ಎಂ.ಸಿ.ಎ/2023-24

ಕೋವಿಡ್-19, ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

RELIGARE ರೆಲಿಗೇರ್ ಫಿನ್‌ವೆಸ್ಟ್ ಲಿಮಿಟೆಡ್

ನೋಂದಾಯಿತ ಕಚೇರಿ: 1407, 14 ನೇ ಮಹಡಿ, ಚಿರಂಜೀವ್ ಟವರ್, 43, ನೆಹರು ಪ್ಲೇಸ್, ನ್ಯೂ ದೆಹಲಿ-110019
ಕಾರ್ಪೊರೇಟ್ ಕಚೇರಿ: 7ನೇ ಮಹಡಿ, ಮ್ಯಾಕ್ಸ್ ಹೌಸ್, ಬ್ಲಾಕ್ ಎ, ಡಾ. ಝಾ ಮಾರ್ಗ, ಓಖ್ಲಾ ಹಂತ 3, ಓಖ್ಲಾ ಇಂಡಸ್ಟ್ರಿಯಲ್ ಎಸ್ಟೇಟ್, ನವದೆಹಲಿ-110 020
ಶಾಖಾ ಕಚೇರಿ: ನಂ.421 /ಜ.1ನೇ ಮಹಡಿ, 1ನೇ ಮುಖ್ಯರಸ್ತೆ, 1ನೇ ಹಂತ, ಕೃಷ್ಣದೇವರಾಯ ರಸ್ತೆ ಇಂದಿರಾನಗರ, ಬೆಂಗಳೂರು, ಕರ್ನಾಟಕ-560038

ಅನುಬಂಧ 4 **ಸ್ವಾಧೀನ ನೋಟೀಸು** ನಿಯಮ 8(1)ರನ್ವಯ

ಕೆಳಗೆ ಸಹಿ ಮಾಡಿರುವವರು ಮೆಸರ್ಸ್ ರೆಲಿಗೇರ್ ಫಿನ್‌ವೆಸ್ಟ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿದ್ದು 1407, 14 ನೇ ಮಹಡಿ, ಚಿರಂಜೀವ್ ಟವರ್, 43, ನೆಹರು ಪ್ಲೇಸ್, ನವದೆಹಲಿ-110 019 ನಲ್ಲಿ ನೋಂದಾಯಿತ ಕಚೇರಿಯನ್ನು ಹೊಂದಿದ್ದಾರೆ ಮತ್ತು 7 ನೇ ಮಹಡಿ, ಮ್ಯಾಕ್ಸ್ ಹೌಸ್ ಬ್ಲಾಕ್ ಎ, ಡಾ. ಝಾ ಮಾರ್ಗ ಓಖ್ಲಾ ಹಂತ 3, ಓಖ್ಲಾ ಇಂಡಸ್ಟ್ರಿಯಲ್ ಎಸ್ಟೇಟ್, ನವದೆಹಲಿ-110 020 ರಲ್ಲಿ ಕಾರ್ಪೊರೇಟ್ ಕಚೇರಿಯನ್ನು ಹೊಂದಿದ್ದಾರೆ. ಮತ್ತು ಅದರ ಶಾಖೆಯು ಕಛೇರಿ ರೆಲಿಗೇರ್ ಫಿನ್‌ವೆಸ್ಟ್ ಲಿಮಿಟೆಡ್, ನಂ.421 /ಜ.1ನೇ ಮಹಡಿ, 1ನೇ ಮುಖ್ಯರಸ್ತೆ, 1ನೇ ಹಂತ, ಕೃಷ್ಣದೇವರಾಯ ರಸ್ತೆ ಇಂದಿರಾನಗರ, ಬೆಂಗಳೂರು, ಕರ್ನಾಟಕ-560038 ಇರುತ್ತದೆ. (ಇನ್ನು ಮುಂದೆ ಆರ್‌ಎಫ್‌ಎಲ್ ಎಂದು ಉಲ್ಲೇಖಿಸಲಾಗಿದೆ) ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ ಎಂಡ್ ರೀಕನ್ಸ್ಟ್ರಕ್ಷನ್ ಮತ್ತು ಭದ್ರತಾ ಹಿತಾಸಕ್ತಿ ಕಾಯ್ದೆ 2002 (ಇನ್ನು ಮುಂದೆ "SARFAESI ACT) ಮತ್ತು ಸೆಕ್ಯುರಿಟಿ ಇಂಟರೆಸ್ಟ್ ಎನ್‌ಫೋರ್ಸ್‌ಮೆಂಟ್ ರೂಲ್ಸ್ 2002ರ ಸೆಕ್ಷನ್ 13(12)ನ್ನು ಜತೆಯಲ್ಲಿ ಓದಲಾಗಿ ದತ್ತ ಅಧಿಕಾರದನ್ವಯ **ದಿನಾಂಕ 06.07.2021 ರಂದು ಬೇಡಿಕೆ ಸೂಚನೆಯನ್ನು** ನೀಡಲಾಗಿದ್ದು, ಈ ಸೂಚನೆಯನ್ನು ಸ್ವೀಕರಿಸಿದ **ದಿನಾಂಕದಿಂದ 60 ದಿನಗಳ ಒಳಗೆ ನೋಟಿಸ್‌ನಲ್ಲಿ ನಮೂದಿಸಲಾದ ಮೊತ್ತವನ್ನು ಮರುಪಾವತಿಸಲು ಅವರಿಗೆ ಕರೆ ನೀಡಲಾಯಿತು.** ಆದಾಗ್ಯೂ ಸಾಲಗಾರರು / ಕಾನೂನು ವಾರಸುದಾರರು ಮೊತ್ತವನ್ನು ಮರುಪಾವತಿಸಲು ವಿಫಲರಾಗಿರುವುದರಿಂದ **ಈ ಮೂಲಕ ನೀಡುತ್ತಿರುವ ನೋಟಿಸ್.**

ಸಾಲಗಾರರು/ ಮತ್ತು ಸಂಬಂಧಿತ ಕಾನೂನು ವಾರಸ್ದಾರರು ಸಾಲ ಮರು ಪಾವತಿಸಲು ವಿಫಲರಾಗಿರುವುದರಿಂದ ಕೆಳಗೆ ಸಹಿ ಮಾಡಿದವರು, ತೆಗೆದುಕೊಂಡ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಸಂಬಂಧಿತ ಕಾನೂನು ಸದರಿ ನಿಯಮಗಳ ಸೆಕ್ಷನ್ 13(4) ಮತ್ತು ನಿಯಮ 9ರೊಂದಿಗೆ ಓದಲಾಗಿ ದತ್ತ ಅಧಿಕಾರದನ್ವಯ **ಈ ಕೆಳಗೆ ವಿವರಿಸಿರುವ ಆಸ್ತಿಯನ್ನು ಸ್ವಾಧೀನ ಪಡೆದಿರುವುದಾಗಿದೆ.**

ನಿರ್ದಿಷ್ಟವಾಗಿ ಸಾಲಗಾರರು / ಕಾನೂನುಬದ್ಧ ಉತ್ತರಾಧಿಕಾರಿಗಳು ಮತ್ತು ಸಾರ್ವಜನಿಕರು ಸಂಬಂಧಿತ ಆಸ್ತಿಗಳೊಂದಿಗೆ ವ್ಯವಹರಿಸದಂತೆ ಎಚ್ಚರಿಕೆ ನೀಡಲಾಗಿದೆ ಮತ್ತು ಆಸ್ತಿಗಳೊಂದಿಗಿನ ಯಾವುದೇ ವ್ಯವಹಾರಗಳು ಈ ಕೆಳಗೆ ನಮೂದಿಸಿರುವ ಪ್ರತಿಯೊಂದು ಸಾಲ ಖಾತೆಯ ಬಾಕಿ ಮೊತ್ತ ಮತ್ತು ಬಡ್ಡಿ ಇನ್ನಿತರ ಖರ್ಚುವೆಚ್ಚಗಳಿಗೆ ಸಂಬಂಧಿಸಿದಂತೆ **ಮೆಸರ್ಸ್ ರೆಲಿಗೇರ್ ಫಿನ್‌ವೆಸ್ಟ್ ಲಿಮಿಟೆಡ್‌ನ ಹಕ್ಕು ಬಾಧ್ಯತೆಗೆ ಒಳಪಟ್ಟಿರುತ್ತದೆ.**

ಸಾಲಗಾರರು ಮತ್ತು ಸಂಬಂಧಿತ ಕಾನೂನುಬದ್ಧ ಉತ್ತರಾಧಿಕಾರಿಗಳ ಗಮನ ಸೆಳೆಯುವುದೇನೆಂದರೆ ಎಸ್ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13 ರ ಸಬ್ ಸೆಕ್ಷನ್ (8)ರನ್ವಯ ನಿಗದಿತ ಕಾಲಾವಕಾಶದಲ್ಲಿ ಪೂರ್ತಿ ಬಾಕಿ ಸಾಲವನ್ನು ಮರುಪಾವತಿಸಿ ಸೆಕ್ಯೂರ್ಡ್ ಆಸ್ತಿಯನ್ನು ಬಿಡಿಸಿಕೊಳ್ಳಬಹುದಾಗಿದೆ.

ಎಸ್ ಎಲ್. ನಂ. 1: ಸಾಲಗಾರರು: 1.ಶ್ರೀ ಚೇತನ್ ಮಹೇಶ್, ನಂ.15 ಕರಿಯಪ್ಪನಹಳ್ಳಿ ಬನ್ನೇರುಘಟ್ಟ, ಬೆಂಗಳೂರು, ಕರ್ನಾಟಕ-560083, **2. ಡಿ.ಮುನಿರಾಜು,** ಗಾಳಿಪ್ಪ ದೇವಪ್ಪರ ಮಗ, **3.ಎಂ.ರತ್ನ,** ಸ.ನಂ.2 ಮತ್ತು 3 ಖಾನೆ -ಕೃಷ್ಣ ಫಾರ್ಮ್, ಅಭಿಮಾನ್ ಸ್ಟುಡಿಯೋ ಹತ್ತಿರ ಶ್ರೀನಿವಾಸಪುರ ಕೆಂಗೇರಿ 3, ಬೆಂಗಳೂರು-560060, **4.ಶ್ರೀ ಚೇತನ್ ಮಹೇಶ್, 5.ಡಿ.ಮುನಿರಾಜು,** ಗಾಳಿಪ್ಪ ದೇವಪ್ಪ ಅವರ ಮಗ, ಸ.ನಂ.4 ಮತ್ತು 5, ಖಾನೆ, ಕರಿಯಪ್ಪನ ಹಳ್ಳಿ ಗೇಟ್, ಬನ್ನೇರುಘಟ್ಟ ರಸ್ತೆ, ಆನೇಕಲ್ ತಾಲ್ಲೂಕು, ಬೆಂಗಳೂರು, ಕರ್ನಾಟಕ-560083, 6.ಕೆ.ನಾಗರಾಜ್, ಗಾಂಧಿ ನಗರ ಸಿದ್ಲಘಟ್ಟ ಸಿದ್ಲಘಟ್ಟ ಚಿಕ್ಕಬಳ್ಳಾಪುರ, ಕರ್ನಾಟಕ--562104; **ಬೇಡಿಕೆಯ ಸೂಚನೆಯಲ್ಲಿ ಕ್ಲೈಮ್ ಮಾಡಿದ ಮೊತ್ತ ರೂ.31,69,470,98; ಬಾಕಿ ಇರುವ ಮೊತ್ತ 23,18, 523 ದಿನಾಂಕ 26.04.2023ರನ್ವಯ /- ಮತ್ತು ಬಡ್ಡಿಗಳು ಮತ್ತು ಅದರ ಮೇಲಿನ ಇತರ ಶುಲ್ಕಗಳು. ಸ್ವಾಧೀನಪಡಿಸಿಕೊಂಡ ದಿನಾಂಕ: 27.04.2023 ಮಧ್ಯಾಹ್ನ 2.30 ಗಂಟೆಗೆ**

ಭದ್ರತೆ/ ಅಡಮಾನದ ಆಸ್ತಿಯ ವಿವರಗಳು

ಖನೇಶ್ವರಿ ನಂ-26:227 ರ ಸರ್ವಾದಿ ಹಕ್ಕುಗಳು: **ಕರಿಯಪ್ಪನಹಳ್ಳಿ ಗ್ರಾಮ, ಬನ್ನೇರುಘಟ್ಟ ಪಾಳ್ಯ, ಜಿಗಣಿ ಹೋಬಳಿ ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆ** ಮತ್ತು ಗಡಿಗುರುತು: ಪೂರ್ವದ ಮೂಲಕ: ರಸ್ತೆ, ಪಶ್ಚಿಮದ ಮೂಲಕ: ಖಾಲಿ ನಿವೇಶನ ನಂ.23- 36, ಉತ್ತರದಿಂದ: ಕೆ.ಸಿ.ಸೀತಪ್ಪ ಆಸ್ತಿ, ದಕ್ಷಿಣದಿಂದ: ಆಸ್ತಿ ನಂ.23/36. ಅಳತೆ: ಪೂರ್ವದಿಂದ ಪಶ್ಚಿಮಕ್ಕೆ 120 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 40 ಅಡಿ ಅಳತೆ.

ಎಸ್ ಎಲ್. ನಂ .2: ಸಾಲಗಾರರು: 1. ಶ್ರೀನಿವಾಸಪ್ಪ ನರೇಂದ್ರ ಬಾಬು, ಕರಿಯಪ್ಪನ ಹಳ್ಳಿ ಗ್ರಾಮ, ಬನ್ನೇರುಘಟ್ಟ ಅಂಚೆ, ಆನೇಕಲ್ ತಾಲೂಕು, ಬೆಂಗಳೂರು, ಕರ್ನಾಟಕ 560083, **2.ಡಿ.ಮುನಿರಾಜು,** ಗಾಳಪ್ಪ ದೇವಪ್ಪರ ಮಗ, ಕೃಷ್ಣ ಫಾರ್ಮ್, ಅಭಿಮಾನ್ ಸ್ಟುಡಿಯೋ ಹತ್ತಿರ , ಶ್ರೀನಿವಾಸಪುರ, ಕೆಂಗೇರಿ, ಬೆಂಗಳೂರು, -560060 **3.ಎನ್. ಆಶಾ,** ಕರಿಯಪ್ಪನ ಹಳ್ಳಿ ಗ್ರಾಮ, ಬನ್ನೇರುಘಟ್ಟ ಅಂಚೆ, ಆನೇಕಲ್ ತಾಲೂಕು, ಬೆಂಗಳೂರು, ಕರ್ನಾಟಕ-560083. **ಬೇಡಿಕೆಯ ಸೂಚನೆಯಲ್ಲಿ ಕ್ಲೈಮ್ ಮಾಡಲಾದ ಮೊತ್ತ: ರೂ.77,31,081.81;** ಬಾಕಿಯಿರುವ ಮೊತ್ತ **ರೂ.59,79,185 ದಿನಾಂಕ 26.04.2023** ರಂತೆ ಬಡ್ಡಿ ಮತ್ತು ಅದರ ಮೇಲಿನ ಇತರ ಶುಲ್ಕಗಳೊಂದಿಗೆ.
ಸ್ವಾಧೀನ ಪಡೆದ ದಿನಾಂಕ: 27.04.2023 ಮಧ್ಯಾಹ್ನ 2.45 ಗಂಟೆಗೆ

ಭದ್ರತೆ/ ಅಡಮಾನದ ಆಸ್ತಿಯ ವಿವರಗಳು

ಬನ್ನೇರುಘಟ್ಟ ಗ್ರಾಮ, ಜಿಗಣಿ ಹೋಬಳಿ, **ದಕ್ಷಿಣ ಆನೇಕಲ್ ತಾಲೂಕು ಬೆಂಗಳೂರು ನಗರ ಬನ್ನೇರುಘಟ್ಟದಲ್ಲಿ** ನೆಲೆಗೊಂಡಿರುವ **1 ಎಕರೆ 26 ಗುಂಟೆಯಲ್ಲಿ** 33 ಗುಂಟಾ ಅಳತೆಯ ಸ್ಥಳ ನಂ. 117/5 ರ ಸರ್ವಾದಿ, ಗಡಿಗುರುತು: ಪೂರ್ವದಲ್ಲಿ ರಸ್ತೆ , ಪಶ್ಚಿಮದಿಂದ: ಅನುಸೂಚಿತ ಆಸ್ತಿಯ ಅದೇ ಭಾಗವನ್ನು ಕೆ.ಪ್ರಕಾಶ್‌ಗೆ ಮಾರಾಟ ಮಾಡಲಾಗಿದೆ, ಉತ್ತರದಿಂದ: ಸೈ.ನಂ.119/6, ದಕ್ಷಿಣದಿಂದ: ಎಸ್. ಸಂ ನಂ.121/1

ಕ್ರ.ಸಂ.3: ಸಾಲಗಾರರು: **1. ನೆಹರು ಸ್ಮಾರಕ ವಿದ್ಯಾ ಕೇಂದ್ರ(ರಿ), 2.ಮುನಿರಾಜು ಕಾರ್ತಿಕ್ , 3.ಡಿ.ಮುನಿರಾಜು,** ಗಾಳಪ್ಪ ದೇವಪ್ಪರ ಮಗ, 4.ಸಿ.ವಿಜಯ, **ಸ.ಸಂ. 1, 2, 3 ಮತ್ತು 4 ವಾಸ,** ನಂ.244/ಸಿ, 32ನೇ ಕ್ರಾಸ್, ಜಯನಗರ, 7ನೇ ಬ್ಲಾಕ್, ಬೆಂಗಳೂರು, ಕರ್ನಾಟಕ-560082 , **5.ಮುನಿರಾಜು ಕಾರ್ತಿಕ್, 6.ಡಿ.ಮುನಿರಾಜು,** ಗಾಳಪ್ಪ ದೇವಪ್ಪರ ಮಗ . 7. ಸಿ ವಿಜಯ, ಸ.ಸಂ.5, 6 ಮತ್ತು 7 ವಾಸ, ನಂ.5151, ಕೃಷ್ಣ ಫಾರ್ಮ್, ಅಭಿಮಾನ್ ಸ್ಟುಡಿಯೋ ಹತ್ತಿರ, ಶ್ರೀನಿವಾಸಪುರ , ಕೆಂಗೇರಿ 3, ಬೆಂಗಳೂರು-560060; **ಬೇಡಿಕೆಯ ಸೂಚನೆಯಲ್ಲಿ ಕ್ಲೈಮ್ ಮಾಡಿದ ಮೊತ್ತ ರೂ.1,92,03,715.53;** ಬಾಕಿ ಇರುವ ಮೊತ್ತ: **ರೂ.1,20,70,843/-** ದಿನಾಂಕ 26.04.2023 ರಂತೆ ಬಡ್ಡಿಗಳು ಮತ್ತು ಅದರ ಮೇಲಿನ ಇತರ ಶುಲ್ಕಗಳು.
ಸ್ವಾಧೀನಪಡಿಸಿಕೊಂಡ ದಿನಾಂಕ: 27.04.2023 ಮಧ್ಯಾಹ್ನ 3.30 ಗಂಟೆಗೆ

ಭದ್ರತೆ/ ಅಡಮಾನದ ಆಸ್ತಿಯ ವಿವರಗಳು

2 ಎಕರೆ 39 ಗುಂಟಾಸ್ ಅಳತೆಯಲ್ಲಿ ಸೈ ನಂ.61 ರ ಸರ್ವಾದಿ, ಕೃಷಿ ಭೂಮಿಯಿಂದ ಶೈಕ್ಷಣಿಕ ವಸತಿ ಉದ್ದೇಶಕ್ಕೆ ಪರಿವರ್ತಿಸಲಾಗಿದೆ, ಬೆಂಗಳೂರು ಜಿಲ್ಲೆಯ ವಿಶೇಷ ಉಪ ಆಯುಕ್ತರ ಕಚೇರಿಯಿಂದ ಪರಿವರ್ತನೆ ಆದೇಶದ ಪ್ರಕಾರ ನಂ. **ಎಎಲ್‌ಎನ್.ಎಸ್‌ಆರ್ (ಕೆ)151/2005-06, ದಿನಾಂಕ 4.7.2009, ಮೈಲಸಂದ್ರ ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ** ತಾಲೂಕಿನಲ್ಲಿರುವ ಬೌಲ್ಡರ್ಸ್‌ನಲ್ಲಿ **ಡಿ.ಮುನಿರಾಜು ಅವರು ಕಾರ್ತಿಕ್‌ಗಾ ಅವರಿಗೆ 30,000 ಚ.ಅಡಿ, ಸ್ವಿಮ್ಮಿಂಗ್ ಪೂಲ್ ಆಫೀಸ್** ಉದ್ದೇಶಿತ ಕೊಡುವುದಾಗಿದೆ. ಗಡಿಗುರುತು: ಪೂರ್ವದಿಂದ: ರಸ್ತೆ, ಪಶ್ಚಿಮದಿಂದ: ಸೈ.ನಂ.61 ರ ಉಳಿಕೆ ಭಾಗ, ಉತ್ತರದಿಂದ: ಸೈ ನಂ.61 ಆಸ್ತಿಯ ಉಳಿಕೆ ಭಾಗ, ದಕ್ಷಿಣದಿಂದ: ಸೈ ನಂ.61 ಆಸ್ತಿಯ ಉಳಿಕೆ ಭಾಗ.

ದಿನಾಂಕ: 27.04.2023 ಅಧಿಕೃತ ಅಧಿಕಾರಿ
ಸ್ಥಳ: ಬೆಂಗಳೂರು ರೆಲಿಗೇರ್ ಫಿನ್‌ವೆಸ್ಟ್ ಲಿಮಿಟೆಡ್

ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಪ.ವಿ6/BA/ಪ.ಪ್ರ./2023-24

ಪರೀಕ್ಷಾ ಭವನ,
ಜ್ಞಾನಭಾರತಿ ಆವರಣ,
ಬೆಂಗಳೂರು - 560056.
ದಿನಾಂಕ : 28-04-2023

ಪ್ರಕಟಣೆ

ಶ್ರೀಮತಿ/ಶ್ರೀ **ASHARANI K.** ರವರು ಅರ್ಜಿಯನ್ನು ಸಲ್ಲಿಸಿ **B.A. (Bachelor of Arts)** ನೊಂದಣಿ ಸಂಖ್ಯೆ: **12KGA60207** ವರ್ಷ **MAY - 2015** ರಲ್ಲಿ ಮೂಲ ಪದವಿ ಪ್ರಮಾಣ ಪತ್ರವನ್ನು ಪಡೆಯಲಾಗಿತ್ತು. ಈ ಪದವಿ ಪ್ರಮಾಣ ಪತ್ರವನ್ನು ಕಳೆದು ಕೊಂಡಿರುತ್ತೇನೆಂದು ತಿಳಿಸಿರುತ್ತಾರೆ.

ಮೇಲೆ ತಿಳಿಸಿದ ಕಾರಣದಿಂದ **B.A (Bachelor of Arts)** ನಕಲು ಪದವಿ ಪ್ರಮಾಣ ಪತ್ರ ನೀಡಲು ಅರ್ಜಿಯನ್ನು ಸಲ್ಲಿಸಿದ್ದಾರೆ.

ಈ ಬಗ್ಗೆ ಸಾರ್ವಜನಿಕರ ಗಮನಕ್ಕೆ ತರಬಯಸುವುದೇನೆಂದರೆ, ಸದರಿ ಪದವಿ ಪ್ರಮಾಣ ಪತ್ರವು ತಮಗೇನಾದರೂ ಸಿಕ್ಕಲ್ಲಿ, [illegible] ಕುಲಸಚಿವರು (ಮೌ), ಪರೀಕ್ಷಾ ಭವನ, ಬೆಂಗಳೂರು ವಿಶ್ವವಿದ್ಯಾಲಯ, ಗಾಂಧಿಭವನ ರಸ್ತೆ, ಜ್ಞಾನಭಾರತಿ ಆವರಣ, ಬೆಂಗಳೂರು - 560056 ಇವರಿಗೆ ಈ ಪತ್ರಿಕಾ ಪ್ರಕಟಣೆಯ ನಂತರ 15 ದಿನಗಳೊಳಗೆ ಕಳುಹಿಸಲು ಕೋರಲಾಗಿದೆ.

ಮೇಲ್ಕಂಡ ಹೆಸರಿನ ಮತ್ತು ನೊಂದಣಿ ಸಂಖ್ಯೆಯ ಪದವಿ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರ ಶಿಫಾರಸ್ಸಿನ ಆಧಾರದ ಮೇಲೆ ವಿತರಿಸಲಾಗುವುದು. ಈ ಹಿಂದೆ ಮೇಲೆ ನಮೂದಿಸಿರುವ ಮೂಲ ಪದವಿ ಪ್ರಮಾಣ ಪತ್ರವು ಚಲಾವಣೆ ರದ್ದಾಗುತ್ತದೆ ಮತ್ತು ಅದಕ್ಕೆ ಕಾನೂನಿನ ಬಲವಿಲ್ಲದಂತಾಗುತ್ತದೆಂದು ಪ್ರಕಟಿಸಲಾಗಿದೆ.

ಆದೇಶದ ಮೇರೆಗೆ,
ಸಹಿ/- ಕುಲಸಚಿವರು (ಮೌ)

PUBLIC NOTICE

It is informed to the General Public as well as Government and Private Institutions that Our Client Mr. Shaik Fahad Son of Mr. Shaik Waheed. N aged about 31 years resident of Keel Krishnarajpuram, Krishnarajpura, Kolar - 563121 Aadhaar number 202865829851, herein after called the "Releases" (which term shall mean and include himself, his heirs, legal representatives, administrators, executors, assigns etc.) of the other part intends to Purchase the following Schedule Property.

Schedule Property

All the piece and parcel of the immovable property residential house property along with standing structure thereon bearing site number 323 having PID number 55-683-323 formed by the Jaraganahalli House Building co-operative society Ltd., situated at 7th Cross, Kadirenahalli, Bengaluru measuring East to West : 30.0 feet and North to South : 44.5 feet total measuring 1335 square feet, bounded on;

East by : site number 324,
West by : site number 322,
North by : site number 328,
South by : Road,

Thus; if anybody having any objection for the same, or any Person/ bank/ financial institution having any claim/charge on the said property, are requested to contact the undersigned on the below mentioned address with 7 days of the publication of this notice. Any claim whatsoever made thereafter will not be binding on my client.

IQRA Law Associates,
19, Lazer Road, Frazer Town,
Bangalore-560005.
Mobile: 9611124031, 9066205747,
8095309604.

CLASSIFIED

SALE

FOR SALE: 6.5cents at Bajpe, Mangalore. Rs.14,00,000/- (Negotiable) Ph:8147997087.
PC02023AN1001015017

FOR SALE: 23cents, Commercial Land, Thodar Moodabidri, Near MITE Engineering College. National Highway Ph:8147997087
PC02023AN1001015018

ಉದ್ಯೋಗಾವಕಾಶ

ಕಂಪನಿ ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. 12000- 15000 ಸಂಬಳ, ಊಟ ವಸತಿಯುಚಿತ; 9036776032 ಮಂಗಳೂರು.
PC02023CH501015184

ಬೆಂಗಳೂರಿನ ಮನೆಯಲ್ಲಿ 5 ಜನಕ್ಕೆ ಒಳ್ಳೆಯ ಸಸ್ಯಾಹಾರಿ ಅಡುಗೆ ಮಾಡಲು ಹೆಂಗಸರು ಬೇಕಾಗಿದ್ದಾರೆ. ಊಟ ವಸತಿ ಉಚಿತ, ಸಂಬಳ ರೂ. 12ರಿಂದ 15 ಸಾವಿರ. ದೂ:9880855005.
PC02023CH501015188

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಬಳಿ ಇರುವ ಆಶ್ರಮಕ್ಕೆ ಹೌಸ್ ಕೀಪಿಂಗ್ (ಸ್ವಚ್ಛತೆ ಮಾಡುವ) ಕೆಲಸಕ್ಕೆ ಹೆಂಗಸರು/ ಗಂಡಸರು ಬೇಕಾಗಿದ್ದಾರೆ. ವಸತಿ ಉಚಿತ, ವೇತನ 10,000. ಓವರ್ ಟೈಮ್ ಕೆಲಸಕ್ಕೆ ಹೆಚ್ಚು ವೇತನ ಕೊಡಲಾಗುವುದು. ದೂ: 9880855005.
PC02023CH501015189

ಭವಿಷ್ಯ

ಕೇರಳದ ತಂತ್ರಿ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ದಾಂಪತ್ಯ ಸಮಸ್ಯೆ, ಭೂಮಿ, ಶತ್ರುಕಾಟ, 3100 ಗ್ಯಾರಂಟಿ ತಕ್ಷಣ ಪರಿಹಾರವಿದೆ, ಉಡುಪಿ 9980841085.
PC02023CH501015225

ನೈರುತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. **11/2023** ದಿನಾಂಕ: **25.04.2023**

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಿನ ನೀಡಿರುವ ವಸ್ತುಗಳ ಸರಬರಾಜಿಗಾಗಿ ಐಆರ್‌ಇಪಿಎಸ್ ಮುಖಾಂತರ ಮಾತ್ರ ಇ-ಟೆಂಡರ್ ಆಹ್ವಾನಿಸಿದ್ದಾರೆ. ಟೆಂಡರ್ ಮುಕ್ತಾಯ ಸಮಯ: 10:30 ಗಂಟೆಗಳು

ಕ್ರ	ಟೆಂಡರ್ ಸಂ.	ಸಂಕ್ಷಿಪ್ತ ವಿವರಣೆ (ಇ-ಓಪನ್ ಟೆಂಡರ್‌ಗಳು)	ಪ್ರಮಾಣ	ಟೆಂಡರ್ ಕೊನೆಯ ದಿನಾಂಕ
1	60235080	ಡ್ರಾಯಿಂಗ್ ಸಂಖ್ಯೆ ಆರ್ ಡಿಎಸ್ಒ ಟಿ-ಎ-6155 ಗೆ [illegible] ಕರ್ಟನ್ ಸ್ಟ್ರಿಪ್	286 ಸೆಟ್	19.05.2023
2	38231354	[illegible]	427 ಸಂ.	17.05.2023
3	33221268	[illegible]	131 ಸೆಟ್	17.05.2023
4	60225034A	[illegible] 60 ಕೆಜಿ 1 ಇನ್ 8.5	15 ಸೆಟ್	15.05.2023
5	60225012A	[illegible] 1 ಇನ್ 8.5, [illegible] 52 ಕೆಜಿ	29 ಸೆಟ್	15.05.2023
6	60225041B	ಆರ್‌ಡಿಎಸ್‌ಒ ಡ್ರಾಯಿಂಗ್ ನಂ. ಟಿ-8238 ಗೆ ಎಲಾಸ್ಟಿಕ್ ರೈಲ್ ಕ್ಲಿಪ್ [illegible]	64,328 ಸಂ.	17.05.2023
7	45231289	[illegible] ಬ್ಯಾಟರಿ, ಸಾಮರ್ಥ್ಯ 8 V / 290 AH	81 ಸಂ.	15.05.2023

ಹೆಚ್ಚಿನ ಮಾಹಿತಿಗಾಗಿ www.ireps.gov.in ವೆಬ್‌ಸೈಟ್‌ಗೆ ಲಾಗ್ ಆನ್ ಆಗಿ

PUB/57/AAV/PRB/SWR/2023-24
ಪ್ರಧಾನ ಮುಖ್ಯ ಸಾಮಗ್ರಿಗಳ ವ್ಯವಸ್ಥಾಪಕರು, ಹುಬ್ಬಳ್ಳಿ

S.W.Railways sw_rly SWRRLY southwesternrailway SWRRLY

PUBLIC NOTICE

General public are hereby informed that my client **Mr. Hanumantha Reddy N S/o. H. Nagappa and Mr. H.N. Krishnamurthy S/o. H. Narasimhaiah** is the absolute owner of the Sy No 168/6 Extent of 0 Acres 0.5 Guntas, 168/16 0 Acre 0.5 Guntas, Sy No 35 04 Acre 13 Guntas, Sy No 2/11 0 Acre 1 Guntas, Sy No165/3 0 Acre 3.5 Gutas,Sy No 108/2 0 Acre 32 Guntas, Sy No 135/1 0 Acre 10.5 Guntas, Sy No 142/2 0 Acre 4 Guntas, under the registered sale deed dated: 10/12/1967 land situated at Kodathi Village, Varthur Hobli, Bengaluru East. With respect to schedule properties Original suits are pending before the Hon'ble Assistant Commissioners Court at Bengaluru. Hence, general public are cautioned not to deal with below mentioned schedule property. If anybody try to deal with the schedule property my client will not be held responsible. Hence, this public notice.

SCHEDULE PROPERTY

All that piece and parcel of lands in **various Survey numbers of Kodathi Village, Varthur Hobli, Bengaluru East, Bengaluru.**

Sl. No.	Sy.No.	Extent	East	West	North	South
1.	168/6	0 Ac 0.5 G	Rangappa House	R Munishami Reddy	Balappa	Krishnappa
2.	168/16	0 Ac 0.5 G	Venkatappa	R Munishami Reddy	Nanjundappa	Mariyappa
3.	35	4 Ac 13 G	Papaiah	R Munishami Reddy	Chairman Ramaiah	Venkatappa
4.	2/11	0 Ac 01 G	Kumbarara Munishami	R Munishami Reddy	Nagappa	Nagappana Etthalu
5.	165/3	0 Ac 3.5 G	Shanubhogara Enamthi	R Munishami Reddy	Channagappa	Kere Katte
6.	108/2	0 Ac 32 G	Annayyappa	R Munishami Reddy	Dodda Annayyappa	Dasappa
7.	135/1	0 Ac 10.5 G	Chandraswamy Devara Enamthi	R Munishami Reddy	Pal Pillaiah	Chikka Papaiah
8.	142/2	0 Ac 04 G	Narayanappa	R Munishami Reddy	Narappa	Chinnappa

Lokesh. K, Advocate.
No.1, 2nd floor, Above Mayura Bekary,
Giriyamma Circle, Devanahalli Town,
Bengaluru Rural District, Mob No.9880700758.

Date:03-05-2023
Place : Bangalore

ಇಂದೇ ಓದಿರಿ ಸುಂದರ ಮಾಸಿಕ ತುಷಾರ

PUBLIC NOTICE

Public are hereby informed that my client B.V. Jayamma has lost the original sale deed of Property bearing Site No. 6, House List Khatha No. 50/1, situated at Kodigehalli Village, K.R.Puram Hobli, Bangalore South Taluk presently having postal address as No. 6, Prashanth Layout, Kodegehalli, Kadugodi Post, Bengaluru-560067, measuring East to West 28 Feet and North to South 30 Feet, bounded on East by : Rose Garden, West by : Private Property, North by: Private Property, South by 20 Feet Road, registered on 17th April 1998 as Document No.319/1998-99, dated 5-08-1998 stored in CD no. ICD-010 regd in the Office of the Sub-Registrar, K.R.Puram. Finder of the said Documents please return the same to the undersigned.

MUNEER AHMED
ADVOCATE & NOTARY
No. 48/1, Swami Vivekanda Road,
(Old Madras Road), Near Halasuru
Someshwara Chariot, Opposite to Metro
Pillar No. 120, Halasuru, Bengaluru-560008
Mobile: 98457 12075

ICICI Home Finance | **ಕಾರ್ಪೋರೇಟ್ ಕಚೇರಿ :** ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಐಸಿಐಸಿಐ ಹೆಚ್‌ಎಫ್‌ಸಿ ಟವರ್, ಅಂಧೇರಿ-ಕುರ್ಲಾ ರಸ್ತೆ, ಅಂಧೇರಿ (ಪೂರ್ವ) ಮುಂಬಯಿ-400059, ಇಂಡಿಯಾ
ಶಾಖಾ ಕಚೇರಿ: 1ನೇ ಮಹಡಿ, ನಂ. 165 & 166, ಮಂಜುನಾಥ ಚೇಂಬರ್ಸ್, ಶಂಕರ್ ನಗರ, ಮುಖ್ಯ ರಸ್ತೆ, ಮಹಾಲಕ್ಷ್ಮಿಪುರಂ, ಬೆಂಗಳೂರು-560096

[ನಿಯಮ 8(6) ರ ನಿಬಂಧನೆ ನೋಡಿ]

ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ಸೂಚನೆ

ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್)ನಿಯಮಗಳು,2002ರ ನಿಯಮ 8 (6) ರ ನಿಬಂಧನೆಯೊಂದಿಗೆ ಓದಲಾಗಿ ಸೆಕ್ಯುರಿಟೈಸೇಷನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯ್ದೆ, 2002ರ ಅಡಿಯಲ್ಲಿ ಸ್ಥಿರ ಆಸ್ತಿಗಳ ಮಾರಾಟಕ್ಕೆ ಇ-ಹರಾಜು ಮಾರಾಟ ಸೂಚನೆ.

ಈ ಮೂಲಕ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು) ಮತ್ತು ಜಾಮೀನುದಾರರಿಗೆ ಸೂಚಿಸುವುದೇನೆಂದರೆ, ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯವರು ಈ ಕೆಳಗೆ ವಿವರಿಸಲಾದ ಸುರಕ್ಷಿತ ಸಾಲಗಾರರಿಗೆ ಅಡಮಾನವಿಟ್ಟ / ವಸೂಲಿ ಮಾಡಲಾದ ಸ್ಥಿರ ಆಸ್ತಿಯ **ಸಾಂಕೇತಿಕ ಸ್ವಾಧೀನತೆಯನ್ನು** ತೆಗೆದುಕೊಂಡಿದ್ದು, ಆಸ್ತಿಯನ್ನು 'ಎಲ್ಲಿದೆಯೋ' 'ಎಷ್ಟಿದೆಯೋ' 'ಹೇಗಿದೆಯೋ' ಯಥಾ ಸ್ಥಿತಿಯಲ್ಲಿ ಮಾರಾಟ ಮಾಡಲಾಗುವುದು. ಸಂಕ್ಷಿಪ್ತ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಕ್ರ. ಸಂ.	ಸಾಲಗಾರ(ರು)/ ಸಹ-ಸಾಲಗಾರರು/ಜಾಮೀನುದಾರರು/ ಕಾನೂನು ಉತ್ತರಾಧಿಕಾರಿಗಳ ಹೆಸರು. ಸಾಲಖಾತೆ ನಂ.	ಆಸ್ತಿಗಳ ವಿವರಗಳು ತಿಳಿದಿರುವ ಹೊಣೆಗಾರಿಕೆಗಳೊಂದಿಗೆ, ಯಾವುದಾದರೂ ಇದ್ದರೆ	ಬಾಕಿ ಮೊತ್ತ	ಮೀಸಲು ಬೆಲೆ ಮುಂಗಡ ಹಣ ಠೇವಣಿ	ಆಸ್ತಿ ತಪಾಸಣೆಯ ದಿನಾಂಕ ಮತ್ತು ಸಮಯ	ಹರಾಜಿನ ದಿನಾಂಕ ಮತ್ತು ಸಮಯ
(ಎ)	(ಬಿ)	(ಸಿ)	(ಡಿ)	(ಇ)	(ಎಫ್)	(ಜಿ)
1.	ರಾಕೇಶ್ ಟಿ ಎ (ಸಾಲಗಾರ) ಟಿಎಸ್ ವೆಂಕಟೇಶ್ (ಸಹ-ಸಾಲಗಾರ) ಸಾಲದ ಖಾತೆ ಸಂಖ್ಯೆ NHTUM00001266932	ಖಾತಾ ನಂ.10702ಬಿ ವಾರ್ಡ್ ನಂ.1 28 ಸೈಟ್ ನಂ.28 ಅಂತರಸನಹಳ್ಳಿ ಬಡಾವಣೆ ಕೆಐಎ ಹತ್ತಿರದಲ್ಲಿ ತುಮಕೂರು ಕರ್ನಾಟಕ 572105	ರೂ. 34,96,338/- ಏಪ್ರಿಲ್ 20, 2023	ರೂ. 32,40,000/- ರೂ. 3,24,000/-	ಮೇ 19, 2023 ಪೂರ್ವಾಹ್ನ 11:00 ಅಪರಾಹ್ನ 03:00	ಮೇ 23, 2023 ಅಪರಾಹ್ನ 2:00 ರಿಂದ 03:00

ಆನ್‌ಲೈನ್ ಹರಾಜನ್ನು ಹರಾಜು ಏಜೆನ್ಸಿ **Globe Tech** ವೆಬ್‌ಸೈಟ್ **(URL Link-/https://BestAuctionDeal.com)** ನಲ್ಲಿ ನಡೆಸಲಾಗುವುದು. ಅಡಮಾನದಾರರು/ನೋಟಿಸ್‌ದಾರರಿಗೆ ಒಟ್ಟು ಬಾಕಿಯನ್ನು ಬಡ್ಡಿಯೊಂದಿಗೆ ಪಾವತಿಸಲು ಕೊನೆಯ ಅವಕಾಶವನ್ನು **ಮೇ 22, 2023ನೇ ಸಾಯಂಕಾಲ 05:00** ರವರೆಗೆ ನೀಡಲಾಗಿದೆ. ಈ ಸುರಕ್ಷಿತ ಸ್ವತ್ತುಗಳನ್ನು ಮೇಲಿನ ವೇಳಾಪಟ್ಟಿಯ ಪ್ರಕಾರ ಮಾರಾಟ ಮಾಡಲಾಗುತ್ತದೆ.

ನಿರೀಕ್ಷಿತ ಬಿಡ್ಡುದಾರರು ಅರ್ನೆಸ್ಟ್ ಮನಿ ಡಿಪಾಸಿಟ್ (ಇಎಮ್‌ಡಿ) ಆರ್‌ಟಿಜಿಎಸ್/ಡಿಮ್ಯಾಂಡ್ ಡ್ರಾಫ್ಟ್ (ಡಿಡಿ) (ಕಾಲಮ್ ಇ ನೋಡಿ) **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, 1ನೇ ಮಹಡಿ, ನಂ. 165 & 166, ಮಂಜುನಾಥ ಚೇಂಬರ್, ಶಂಕರ್ ನಗರ, ಮುಖ್ಯ ರಸ್ತೆ, ಮಹಾಲಕ್ಷ್ಮಿಪುರಂ, ಬೆಂಗಳೂರು-560 096** ಇಲ್ಲಿ **ಮೇ 22, 2023 ರಂದು ಅಪರಾಹ್ನ 4** ಗಂಟೆಯೊಳಗೆ ಸಲ್ಲಿಸಬೇಕು. ಗಮನಿಸಿ, ನಿರೀಕ್ಷಿತ ಬಿಡ್ಡುದಾರರು ವೆಬ್‌ಸೈಟ್ ಮೂಲಕ ತಮ್ಮ ಪ್ರಸ್ತಾವವನ್ನು ಸಲ್ಲಿಸಲು ಸಾಧ್ಯವಾಗದಿದ್ದರೆ ನಂತರ ಟೆಂಡರ್ ದಾಖಲೆಗಳ ಸಹಿ ಮಾಡಿದ ಪ್ರತಿಯನ್ನು **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, 1ನೇ ಮಹಡಿ, ನಂ. 165 & 166, ಮಂಜುನಾಥ ಚೇಂಬರ್, ಶಂಕರ್ ನಗರ, ಮುಖ್ಯ ರಸ್ತೆ, ಮಹಾಲಕ್ಷ್ಮಿಪುರಂ, ಬೆಂಗಳೂರು-560 096** ಇಲ್ಲಿ **ಮೇ 22, 2023ನೇ ಸಾಯಂಕಾಲ 5.00** ಗಂಟೆ ಮೊದಲು ಸಲ್ಲಿಸಬಹುದು. ಅರ್ನೆಸ್ಟ್ ಮನಿ ಡೆಪಾಸಿಟ್ ಡಿಮ್ಯಾಂಡ್ ಡ್ರಾಫ್ಟ್ (ಡಿಡಿ)ಯನ್ನು ರಾಷ್ಟ್ರೀಕೃತ/ಶೆಡ್ಯೂಲ್ಡ್ ಬ್ಯಾಂಕ್‌ನಿಂದ **"ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್-ಹರಾಜು"** ಹೆಸರಿನಲ್ಲಿ ಬೆಂಗಳೂರಿನಲ್ಲಿ ಪಾವತಿಸಬೇಕು.

ಟೆಂಡರ್‌ಗಳಲ್ಲಿನ ಪರಿಶೀಲನೆ, ನಿಯಮಗಳು ಮತ್ತು ಇ-ಹರಾಜು ಅಥವಾ ಸಲ್ಲಿಕೆ ಷರತ್ತುಗಳಿಗೆ ಸಂಬಂಧಿಸಿದಂತೆ ಯಾವುದೇ ಹೆಚ್ಚಿನ ಮಾಹಿತಿಗಳಿಗಾಗಿ **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ 7021072869** ಅಥವಾ **ಮಾರಾಟ & ಮಾರ್ಕೆಟಿಂಗ್ ಪಾಲುದಾರರಾದ ನೆಕ್ಸ್‌ಟೆನ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್** ಇವರನ್ನು ಸಂಪರ್ಕಿಸಬಹುದು.

ಅಧಿಕೃತ ಅಧಿಕಾರಿಯವರು ಯಾವುದೇ ಹೆಚ್ಚಿನ ಕಾರಣಗಳನ್ನು ನೀಡದೇ ಅಥವಾ ಎಲ್ಲಾ ಬಿಡ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದ್ದಾರೆ. ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, **https://www.icicihfc.com/** ಗೆ ಭೇಟಿ ನೀಡಿ.

ದಿನಾಂಕ: ಮೇ 03, 2023 ಅಧಿಕೃತ ಅಧಿಕಾರಿ
ಸ್ಥಳ: ತುಮಕೂರು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್

ICICI Home Finance | **ಕಾರ್ಪೋರೇಟ್ ಕಚೇರಿ :** ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಐಸಿಐಸಿಐ ಹೆಚ್‌ಎಫ್‌ಸಿ ಟವರ್, ಅಂಧೇರಿ-ಕುರ್ಲಾ ರಸ್ತೆ, ಅಂಧೇರಿ (ಪೂರ್ವ) ಮುಂಬಯಿ-400059, ಇಂಡಿಯಾ
ಶಾಖಾ ಕಚೇರಿ: 1ನೇ ಮಹಡಿ, ನಂ. 181, ಸುಂದರಿ ಆರ್ಮಡೇಲ್, ವೈಟ್‌ಫೀಲ್ಡ್ ಮುಖ್ಯರಸ್ತೆ, ವೈಟ್‌ಫೀಲ್ಡ್, ಬೆಂಗಳೂರು-560 066

[ನಿಯಮ 8(6) ರ ನಿಬಂಧನೆ ನೋಡಿ]

ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಸೂಚನೆ

ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್)ನಿಯಮಗಳು,2002ರ ನಿಯಮ 8 (6) ರ ನಿಬಂಧನೆಯೊಂದಿಗೆ ಓದಲಾಗಿ ಸೆಕ್ಯುರಿಟೈಸೇಷನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯ್ದೆ, 2002ರ ಅಡಿಯಲ್ಲಿ ಸ್ಥಿರ ಆಸ್ತಿಗಳ ಮಾರಾಟಕ್ಕೆ ಇ-ಹರಾಜು ಮಾರಾಟ ಸೂಚನೆ.

ಈ ಮೂಲಕ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು) ಮತ್ತು ಜಾಮೀನುದಾರರಿಗೆ ಸೂಚಿಸುವುದೇನೆಂದರೆ, ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯವರು ಈ ಕೆಳಗೆ ವಿವರಿಸಲಾದ ಸುರಕ್ಷಿತ ಸಾಲಗಾರರಿಗೆ ಅಡಮಾನವಿಟ್ಟ/ವಸೂಲಿ ಮಾಡಲಾದ ಸ್ಥಿರ ಆಸ್ತಿಯ ಸಾಂಕೇತಿಕ ಸ್ವಾಧೀನತೆಯನ್ನು ತೆಗೆದುಕೊಂಡಿದ್ದು, ಆಸ್ತಿಯನ್ನು 'ಎಲ್ಲಿದೆಯೋ' 'ಎಷ್ಟಿದೆಯೋ' 'ಹೇಗಿದೆಯೋ' ಯಥಾ ಸ್ಥಿತಿಯಲ್ಲಿ ಮಾರಾಟ ಮಾಡಲಾಗುವುದು. ಸಂಕ್ಷಿಪ್ತ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಕ್ರ. ಸಂ.	ಸಾಲಗಾರ(ರು)/ ಸಹ-ಸಾಲಗಾರರು/ಜಾಮೀನುದಾರರು/ ಕಾನೂನು ಉತ್ತರಾಧಿಕಾರಿಗಳ ಹೆಸರು. ಸಾಲಖಾತೆ ನಂ.	ಭದ್ರತಾ ಆಸ್ತಿಗಳ ವಿವರಗಳು ತಿಳಿದಿರುವ ಹೊಣೆಗಾರಿಕೆಗಳೊಂದಿಗೆ, ಯಾವುದಾದರೂ ಇದ್ದರೆ	ಬಾಕಿ ಮೊತ್ತ	ಮೀಸಲು ಬೆಲೆ ಮುಂಗಡ ಹಣ ಠೇವಣಿ	ಆಸ್ತಿ ತಪಾಸಣೆಯ ದಿನಾಂಕ ಮತ್ತು ಸಮಯ	ಹರಾಜಿನ ದಿನಾಂಕ ಮತ್ತು ಸಮಯ
(ಎ)	(ಬಿ)	(ಸಿ)	(ಡಿ)	(ಇ)	(ಎಫ್)	(ಜಿ)
1.	ಯುವರಾಜ ಕೆ (ಸಾಲಗಾರ) ರಶ್ಮಿ ಪಿ (ಸಹ-ಸಾಲಗಾರ) ಸಾಲದ ಖಾತೆ ಸಂಖ್ಯೆ LHBNG00001285705	ಖಾಲಿ ನಿವೇಶನ ಸಂಖ್ಯೆ 37ಬಿ, ಆಸ್ತಿ ಎಸ್‌ಸಿ ನಂ72/2 1ನೇ ಕ್ರಾಸ್, ಅಕ್ಷಯ ಮೆಡೋಸ್ ಹಂತ2 ಕಿತ್ತಗನೂರು ಗ್ರಾಮ ಬಿದರಹಳ್ಳಿ ಬೆಂಗಳೂರು 560061	ರೂ. 23,88,018/- ಏಪ್ರಿಲ್ 20, 2023	ರೂ. 25,74,000/- ರೂ. 2,57,400/-	ಜೂನ್ 05, 2023 ಪೂರ್ವಾಹ್ನ 11:00 -ಅಪರಾಹ್ನ 03:00	ಜೂನ್ 07, 2023ರಂದು ಅಪರಾಹ್ನ 2:00 ರಿಂದ 03:00

ಆನ್‌ಲೈನ್ ಹರಾಜನ್ನು ಹರಾಜು ಏಜೆನ್ಸಿ **Globe Tech** ವೆಬ್‌ಸೈಟ್ **(URL Link-/https://BestAuctionDeal.com)** ನಲ್ಲಿ ನಡೆಸಲಾಗುವುದು. ಅಡಮಾನದಾರರು/ನೋಟಿಸ್‌ದಾರರಿಗೆ ಒಟ್ಟು ಬಾಕಿಯನ್ನು ಬಡ್ಡಿಯೊಂದಿಗೆ ಪಾವತಿಸಲು ಕೊನೆಯ ಅವಕಾಶವನ್ನು **ಜೂನ್ 06, 2023ನೇ ಸಾಯಂಕಾಲ 05:00** ರವರೆಗೆ ನೀಡಲಾಗಿದೆ. ಈ ಸುರಕ್ಷಿತ ಸ್ವತ್ತುಗಳನ್ನು ಮೇಲಿನ ವೇಳಾಪಟ್ಟಿಯ ಪ್ರಕಾರ ಮಾರಾಟ ಮಾಡಲಾಗುತ್ತದೆ.

ನಿರೀಕ್ಷಿತ ಬಿಡ್ಡುದಾರರು ಅರ್ನೆಸ್ಟ್ ಮನಿ ಡಿಪಾಸಿಟ್ (ಇಎಮ್‌ಡಿ) ಆರ್‌ಟಿಜಿಎಸ್/ಡಿಮ್ಯಾಂಡ್ ಡ್ರಾಫ್ಟ್ (ಡಿಡಿ) (ಕಾಲಮ್ ಇ ನೋಡಿ) **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, 1ನೇ ಮಹಡಿ, ನಂ. 181, ಸುಂದರಿ ಆರ್ಮಡೇಲ್, ವೈಟ್‌ಫೀಲ್ಡ್ ಮುಖ್ಯರಸ್ತೆ, ವೈಟ್‌ಫೀಲ್ಡ್, ಬೆಂಗಳೂರು-560 066** ಇಲ್ಲಿ **ಜೂನ್ 06, 2023 ರಂದು ಅಪರಾಹ್ನ 4** ಗಂಟೆಯೊಳಗೆ ಸಲ್ಲಿಸಬೇಕು. ಗಮನಿಸಿ, ನಿರೀಕ್ಷಿತ ಬಿಡ್ಡುದಾರರು ವೆಬ್‌ಸೈಟ್ ಮೂಲಕ ತಮ್ಮ ಪ್ರಸ್ತಾವವನ್ನು ಸಲ್ಲಿಸಲು ಸಾಧ್ಯವಾಗದಿದ್ದರೆ ನಂತರ ಟೆಂಡರ್ ದಾಖಲೆಗಳ ಸಹಿ ಮಾಡಿದ ಪ್ರತಿಯನ್ನು **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, 1ನೇ ಮಹಡಿ, ನಂ. 181, ಸುಂದರಿ ಆರ್ಮಡೇಲ್, ವೈಟ್‌ಫೀಲ್ಡ್ ಮುಖ್ಯರಸ್ತೆ, ವೈಟ್‌ಫೀಲ್ಡ್, ಬೆಂಗಳೂರು-560 066** ಇಲ್ಲಿ **ಜೂನ್ 06, 2023ನೇ ಸಾಯಂಕಾಲ 5.00** ಗಂಟೆ ಮೊದಲು ಸಲ್ಲಿಸಬಹುದು. ಅರ್ನೆಸ್ಟ್ ಮನಿ ಡೆಪಾಸಿಟ್ ಡಿಮ್ಯಾಂಡ್ ಡ್ರಾಫ್ಟ್ (ಡಿಡಿ)ಯನ್ನು ರಾಷ್ಟ್ರೀಕೃತ/ಶೆಡ್ಯೂಲ್ಡ್ ಬ್ಯಾಂಕ್‌ನಿಂದ **"ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್-ಹರಾಜು"** ಹೆಸರಿನಲ್ಲಿ ಬೆಂಗಳೂರಿನಲ್ಲಿ ಪಾವತಿಸಬೇಕು.

ಟೆಂಡರ್‌ಗಳಲ್ಲಿನ ಪರಿಶೀಲನೆ, ನಿಯಮಗಳು ಮತ್ತು ಇ-ಹರಾಜು ಅಥವಾ ಸಲ್ಲಿಕೆ ಷರತ್ತುಗಳಿಗೆ ಸಂಬಂಧಿಸಿದಂತೆ ಯಾವುದೇ ಹೆಚ್ಚಿನ ಮಾಹಿತಿಗಳಿಗಾಗಿ **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ 7021072869** ಅಥವಾ **ಮಾರಾಟ & ಮಾರ್ಕೆಟಿಂಗ್ ಪಾಲುದಾರರಾದ ನೆಕ್ಸ್‌ಟೆನ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್** ಇವರನ್ನು ಸಂಪರ್ಕಿಸಬಹುದು.

ಅಧಿಕೃತ ಅಧಿಕಾರಿಯವರು ಯಾವುದೇ ಹೆಚ್ಚಿನ ಕಾರಣಗಳನ್ನು ನೀಡದೇ ಅಥವಾ ಎಲ್ಲಾ ಬಿಡ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದ್ದಾರೆ. ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, **https://www.icicihfc.com/** ಗೆ ಭೇಟಿ ನೀಡಿ.

ದಿನಾಂಕ: ಮೇ 03, 2023 ಅಧಿಕೃತ ಅಧಿಕಾರಿ
ಸ್ಥಳ: ಬೆಂಗಳೂರು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್